ಮೂ. ದಾ. ನಂ. 123/2018

ಡಿ.ಡಬ್ಲ್ಯು.1

(ಇಂದು ದಿನಾಂಕ 16-09-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ವಾದಿ ಪರ ಶ್ರೀ ಎಮ್.ಎನ್.ಎಸ್. ವಕೀಲರಿಂದಃ**

ದಾವಾ ಸ್ವತ್ತುಗಳು ವಾದಿಯರ ಹಕ್ಕಿನ ಸ್ವತ್ತು ಎಂದರೆ ಸರಿ. ದಾವಾ ಸ್ವತ್ತುಗಳು ಭಾಗಾಯತ ಸ್ವತ್ತುಗಳು ಎಂದರೆ ಸರಿ. ದಾವಾ ಸ್ವತ್ತುಗಳು ಪರಸ್ಪರ ಹೊಂದಿಕೊಂಡಂತೆ ಇದೆ ಎಂದರೆ ಸರಿ. ದಾವಾ 1 ನೇ ಸ್ವತ್ತಿನ ಪೂರ್ವ ದಿಕ್ಕಿನಲ್ಲಿ ಹಾಗೂ ದಾವಾ 2 ನೇ ಸ್ವತ್ತಿನ ಉತ್ತರ ದಿಕ್ಕಿನಲ್ಲಿ ನನಗೆ ಸೇರಿದ ಸ್ವತ್ತು ಇದೆ ಎಂದರೆ ಸರಿ.

ಮೂ. ದಾ. ನಂ. 123/2018

ಡಿ.ಡಬ್ಲ್ಯು.1

ದಾವಾ ಸ್ವತ್ತುಗಳ ಸುತ್ತ ಕಂಪೌಂಡ್ ಇದೆ ಎಂದರೆ ಸಾಕ್ಷಿಯು 2 ಕಡೆ ಮಾತ್ರ ಇದೆ ಎಂದು ನುಡಿಯುತ್ತಾರೆ. ದಾವಾ 1 ನೇ ಐಟಂ ಸ್ವತ್ತಿನ ದಕ್ಷಿಣಕ್ಕೆ ಮತ್ತು ಪಶ್ಚಿಮಕ್ಕೆ ಕಂಪೌಂಡ್ ಇದೆ. ದಾವಾ 2 ನೇ ಐಟಂ ಸ್ವತ್ತಿನ ಸುತ್ತಲೂ ಕಂಪೌಂಡ್ ಇದೆ. ಸದರಿ ಕಂಪೌಂಡ್ ಸುಮಾರು 40 ರಿಂದ 50 ವರ್ಷಗಳಿಂದ ಅಸ್ತಿತ್ವದಲ್ಲಿ ಇದೆ ಎಂದರೆ ಸಾಕ್ಷಿಯಂ ಇತ್ತೀಚೆಗೆ ನಿರ್ಮಿಸಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಹಳೆಯ ಕಂಪೌಂಡ್‌ನ್ನು ತೆಗೆದು ಅದೇ ಸ್ಥಳದಲ್ಲಿ ಹೊಸ ಕಂಪೌಂಡ್ ನಿರ್ಮಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಹಳೆಯ ಕಂಪೌಂಡ್ 40 ರಿಂದ 50 ವರ್ಷಗಳ ಪೂರ್ವದಿಂದ ಅಸ್ತಿತ್ವದಲ್ಲಿ ಇತ್ತಾ ಎಂದರೆ ಸಾಕ್ಷಿಯು ಬೇಲಿ ಇತ್ತು ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಸುತ್ತ ಕಂಪೌಂಡ್ ಸುಮಾರು 40 –50 ವರ್ಷಗಳಿಂದ ಅಸ್ತಿತ್ವದಲ್ಲಿ ಇತ್ತು ಎಂದರೆ ಸರಿಯಲ್ಲ.

ದಾವಾ 2 ನೇ ಐಟಂ ಸ್ವತ್ತಿನ ಹಾಗೂ ನನಗೆ ಸೇರಿದ ಸರ್ವೇ ನಂ. 82/4 ರ ಸ್ವತ್ತಿನ ಪೂರ್ವ ದಿಕ್ಕಿನಲ್ಲಿ 8 ಪುಟ್ ರಸ್ತೆಯನ್ನು ಬಿಡಲಾಗಿರುತ್ತದೆ ಎಂದರೆ ಸಾಕ್ಷಿಯು ನಾನು 10 ಪುಟ್ ವಿಸ್ತೀರ್ಣದ ಪ್ರದೇಶವನ್ನು ರಸ್ತೆಗಾಗಿ ಬಿಟ್ಟುಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ರಸ್ತೆಗಾಗಿ ಬಿಟ್ಟಂತಹ 10 ಪುಟ್ ಪ್ರದೇಶ ನನಗೆ ಸೇರಿದ್ದಾಗಿರುತ್ತದೆ. ಸದರಿ ದಾರಿಯನ್ನು ನಾನು ಮತ್ತು ವಾದಿಯರು ಆಚಾರಿ ಕೊಪ್ಪಕ್ಕೆ ಹೋಗುವ ರಸ್ತೆಯ ಸಲುವಾಗಿ ಬಿಟ್ಟುಕೊಟ್ಟಿರುತ್ತೇವೆ ಎಂದರೆ ಸರಿ. ಸದರಿ ರಸ್ತೆಯನ್ನು ಪಂಚಾಯತದವರು ಕಾಲಕಾಲಕ್ಕೆ ದುರಸ್ತಿ ಹಾಗೂ ಅಭಿವೃದ್ಧಿ ಮಾಡುತ್ತಿರುತ್ತಾರೆ ಎಂದರೆ ಸರಿ.

ದಾವೆಯೊಂದಿಗೆ ಸಲ್ಲಿಸಲಾದ ದಾವಾ ಹಾತ್ ನಕಾಶೆ ವಸ್ತು ಸ್ಥಿತಿಯಂತೆ ಇದೆಯಾ ಎಂದು ಕೇಳಲಾಗಿ ಸಾಕ್ಷಿಯು ದಾವಾ ಹಾತ್ ನಕಾಶೆಯನ್ನು ನೋಡಿ ಪರಿಶೀಲಿಸಿ ಸರಿ ಇದೆ ಎಂದು ನುಡಿದಿರುತ್ತಾರೆ.

ನನಗೆ ಸೇರಿದ ಸರ್ವೇ ನಂ. 82/4 ನ್ನು ಅಳತೆ ಮಾಡಿಸಲು ಸರ್ವೇ ಇಲಾಖೆಗೆ ಅರ್ಜಿ ನೀಡಿದ್ದೆನು ಎಂದರೆ ಸರಿ. ನಾನು ಭೂಮಾಪಕರೊಂದಿಗೆ ಒಳಸಂಚು ರೂಪಿಸಿ ದಾರಿಗಾಗಿ ಬಿಟ್ಟಂತಹ ವಿಸ್ತೀರ್ಣದ ಪ್ರದೇಶವನ್ನು ಸೇರಿದಂತೆ ಅಳತೆಯನ್ನು ಮಾಡಿಸಲು ಪ್ರಯತ್ನಿಸಿದ್ದೆ ಎಂದರೆ ಸರಿಯಲ್ಲ. ಭೂಮಾಪಕರೊಂದಿಗೆ ಒಳಸಂಚು ರೂಪಿಸಿ ನಕಾಶೆಯನ್ನು ತಯಾರಿಸಿ ವಾದಿಯರು ನನ್ನ ಹಕ್ಕಿನ ಸ್ಥಳವನ್ನು ಒತ್ತುವರಿ ಮಾಡಿರುತ್ತಾರೆ ಎಂದು ಪುರಾವೆಗೊಳಿಸುವ ಪ್ರಯತ್ನವನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮೂ. ದಾ. ನಂ. 123/2018

ಡಿ.ಡಬ್ಲ್ಯು 1

ವಾದಿಗಳು ಒತ್ತುವರಿ ಮಾಡಿದ್ದಾರೆ ಎಂದು ಸುಳ್ಳು ಆರೋಪಣೆ ಮಾಡಿ ಅವರ ಸ್ವತ್ತಿನ ಕಂಪೌಂಡ್ ನ್ನು ತೆಗೆಯುವ ಪ್ರಯತ್ನವನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ